೧) ಸಣ್ಣ ರೈತರಿಗೆ ಶೇ ೨೫

೨) ಕೃಷಿಕಾರ್ಮಿಕರಿಗೆ ಶೇ ೩೩ ೧/೩

೩) ಕೃಷಿಯೇತರ ಕಾರ್ಮಿಕರಿಗೆ ಶೇ ೩೩ ೧/೩

೪) ಅತಿ ಸಣ್ಣ ರೈತರಿಗೆ ಶೇ ೩೩ ೧/೩

೫) ಪರಿಶಿಷ್ಟ ಜನಾಂಗ (ಷೆಡ್ಯೂಲ್ ಟ್ರೈಬ್ಸ್) ಶೇ ೫೦

ಆ) ಇದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಸೇರಿರುತ್ತದೆ.

ಗ್ರಂಥಾಲಯಗಳನ್ನು ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಸ್ಥಾಪಿಸುವುದು

೧೪೩೯. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಯಾವ ತಾಲ್ಲೂಕುಗಳಲ್ಲಿ ಗ್ರಂಥಾಲಯಗಳು ಪ್ರಾರಂಭವಾಗಿರುವುದಿಲ್ಲ;

ಆ) ಈಗ ಗ್ರಂಥಾಲಯಗಳನ್ನು ಹೊಂದಿರುವ ತಾಲ್ಲೂಕುಗಳು ಎಷ್ಟು?

ಇ) ರಾಜ್ಯದ ಎಲ್ಲ ಹೋಬಳಿಗಳಿಗೂ ಈ ಸೌಕರ್ಯ ಒದಗಿಸುವುದರಿಂದ ತಗಲುವ ವೆಚ್ಚ ಎಷ್ಟು ?

ಈ) ಹೋಬಳಿ ಮಟ್ಟದಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸುವ ಸಲಹೆ ಸರ್ಕಾರದವರಲ್ಲಿದೆಯೇ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

(ಅ) ಈ ಕೆಳಗೆ ಕಾಣಿಸಿದ ತಾಲ್ಲೂಕುಗಳಲ್ಲಿ ಗ್ರಂಥಾಲಯಗಳು ಪ್ರಾರಂಭವಾಗಿರುವುದಿಲ್ಲ.

೧) ಉತ್ತರ ಕನ್ನಡ ಜಿಲ್ಲೆ.—ಅ) ಸೂಪ ಆ) ಮುಂಡಗೋಡ ಇ) ಹೊನ್ನಾವರ

೨) ರಾಯಚೂರು ಜಿಲ್ಲೆ,—ಅ) ದೇವದುರ್ಗ

೩) ತುಮಕೂರು ಜಿಲ್ಲೆ.—ಅ) ಶಿರಾ ಆ) ಕುಣಿಗಲ್ ಇ) ಕೊರಟಗೆರೆ

೪) ಶಿವಮೊಗ್ಗ ಜಿಲ್ಲೆ.—ಅ) ಹೊಸನಗರ ಆ) ಹೊನ್ನಾಳಿ ಇ) ಸೊರಬ

೫) ಬಿಜಾಪುರ ಜಿಲ್ಲೆ.—ಅ) ಮುದ್ದೇಬಿಹಾಳ

೬) ಧಾರವಾಡ ಜಿಲ್ಲೆ.—ಅ) ನವಲಗುಂದ

೭) ಬೆಳಗಾಂ ಜಿಲ್ಲೆ.—ಅ) ಖಾನಾಪುರ

೮) ಗುಲ್ಬರ್ಗಾ ಜಿಲ್ಲೆ.— ಅ) ಆಫಜಲ್‌ಪುರ ಆ) ಚಿಂಚೋಳಿ ಇ) ಷಹಾಪುರ

ಒಟ್ಟು ೨೬ ತಾಲ್ಲೂಕುಗಳು

(ಆ) ೧೫೯ ತಾಲ್ಲೂಕುಗಳು

(ಇ) ರೂ. ೩,೬೦,೯೫,೦೫೬-೦೦

(ಈ) ಹಂತ ಹಂತವಾಗಿ ಹೋಬಳಿಗಳಲ್ಲಿಯೂ ಗ್ರಂಥಾಲಯ ಸೌಲಭ್ಯವನ್ನು ವಿಸ್ತರಿಸಲಾಗುವುದು.

ಕೆ. ಎಂ. ಎಫ್. ಆಪರೇಷನ್ ಫ್ಲಡ್

೧೪೪೮. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು) ಮತ್ತು ಕೆ. ಎಂ. ಕೃಷ್ಣಾರೆಡ್ಡಿ (ಚಿಂತಾಮಣಿ).—ಮಾನ್ಯ ಪಶುವೈದ್ಯ ಹಾಗೂ ಪಶು ಸಂಗೋಷಣಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೆ. ಎಂ. ಎಫ್‌ನ ಆಪರೇಷನ್ ಫ್ಲಡ್-೧ ಮತ್ತು ೨ ರ ಅಂದಾಜು ಎಷ್ಟು ಹಾಗೂ ವಿಶ್ವ ಬ್ಯಾಂಕಿನ ನೆರವು ಎಷ್ಟು ಮತ್ತು ಇದರ ವೆಚ್ಚವೆಷ್ಟು ?

ಅ) ಈ ಯೋಜನೆಗಳಿಂದ ಎಷ್ಟು ಜಿಲ್ಲೆಗಳಿಗೆ ಉಪಯೋಗಿಸಲಾಗಿದೆ.

ಇ) ಕೋಲಾರ ಜಿಲ್ಲೆಗೆ ಎಷ್ಟು ಖರ್ಚಾಗಿದೆ ಹಾಗೂ ಏನು ಉಪಯೋಗವಾಗಿದೆ.

ಶ್ರೀ ಸಿದ್ಧರಾಮಯ್ಯ (ಪಶುಸಂಗೋಪನಾ ಮತ್ತು ಪಶುವೈದ್ಯ ರಾಜ್ಯ ಮಂತ್ರಿಗಳು).—

ಅ) ಕೆ ಎಂ.ಎಫ್. ಕಾರ್ಯಾಚರಣೆ ಹೊನಲು-೧ (ಒಎಫ್-೧) ಕಾರ್ಯಕ್ರಮವನ್ನು ಕರ್ನಾಟಕದಲ್ಲಿ ಕಾರ್ಯಗತಗೊಳಿಸಿಲ್ಲ, ಕೆ. ಎಂ. ಎಫ್ ಕಾರ್ಯಾಚರಣೆ ಹೊನಲು-೨ (ಒಎಫ್-೨) ಕಾರ್ಯಕ್ರಮವನ್ನು ಕಾರ್ಯಗತ ಗೊಳಿಸುತ್ತಿದೆ. ಕೆ ಡಿ ಡಿ ಸಿ ಯು ಕಾರ್ಯರೂಪಕ್ಕೆ ತಂದ ವಿಶ್ವಬ್ಯಾಂಕ್ ಸಹಾಯಿತ ಕರ್ನಾಟಕ ಹೈನುಗಾರಿಕೆ ಅಭಿವೃದ್ಧಿ ಯೋಜನೆಯು (ಕೆ. ಡಿ. ಡಿ. ಸಿ.) ರೂ. ೪೫ ಕೋಟಿಗಳ ಯೋಜನೆಯಾಗಿದ್ದು, ಇದರಲ್ಲಿ ವಿಶ್ವ ಬ್ಯಾಂಕಿನ ಸಹಾಯವು ರೂ. ೨೪.೦೦ ಕೋಟಿಗಳಷ್ಟಾಗಿತ್ತು. ವಿಶ್ವ ಬ್ಯಾಂಕ್ ಸಹಾಯಿತ ಯೋಜನೆಯಡಿಯಲ್ಲಿ ರೂ. ೪೬.೦೦ ಕೋಟಿಗಳನ್ನು ಖರ್ಚು ಮಾಡಲಾಗಿದೆ ಕಾರ್ಯಾಚರಣೆ ಹೊನಲು-೨ ಕಾರ್ಯಕ್ರಮದ ಅಂದಾಜು ವೆಚ್ಚವು ರೂ. ೮೨.೬೧ ಕೋಟಿಗಳಷ್ಟಾಗಿದೆ ಕಾರ್ಯಾಚರಣೆ ಹೊನಲು-೨ ಕಾರ್ಯಕ್ರಮದಡಿಯಲ್ಲಿ ಇದುವರೆಗೆ ಸುಮಾರು ೭೮.೦೦ ಲಕ್ಷಗಳನ್ನು ವ್ಯಯಿಸಲಾಗಿದೆ.

ಆ) ವಿಶ್ವಬ್ಯಾಂಕ್ ಸಹಾಯಿತ ಯೋಜನೆಯನ್ನು ದಕ್ಷಿಣ ಕರ್ನಾಟಕದ ೮ (ಎಂಟು) ಜಿಲ್ಲೆಗಳಲ್ಲಿ ಕಾರ್ಯಗತಗೊಳಿಸಲಾಗಿತ್ತು. ಕಾರ್ಯಾಚರಣೆ ಹೊನಲು-೨ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ೧೯ ಜಿಲ್ಲೆಗಳಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ.

ಇ) ಕೋಲಾರ ಜಿಲ್ಲೆಯಲ್ಲಿ ವ್ಯಯಿಸಲಾದ ಹಣದ ಮೊತ್ತ ರೂ. ೧.೧೩ ಕೋಟಿಗಳು ಈ ಜಿಲ್ಲೆಯಲ್ಲಿ ೩೦೩ ಡೈರಿ ಸಹಕಾರಿ ಸಂಘಗಳು ಕಾರ್ಯಾಚರಣೆ ನಡೆಸುತ್ತಿವೆ. ಈ ಸಂಘಗಳ ಮೂಲಕ ಕೋಲಾರ ಜಿಲ್ಲೆಯ ರೈತರಿಗೆ ಪಶುವೈದ್ಯಕೀಯ ಆರೋಗ್ಯ ಸೇವೆ ಮತ್ತು ಕೃತಕ ಗರ್ಭಧಾರಣಾ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಸಧ್ಯಕ್ಕೆ ಹಾಲನ್ನು ಸಂಸ್ಕರಿಸುವುದಕ್ಕಾಗಿ ಚಿಂತಾಮಣಿ, ಕೋಲಾರ ಮತ್ತು ಬಾಗೇಪಲ್ಲಿಯಲ್ಲಿ ತಲಾ ಒಂದರಂತೆ ೩ (ಮೂರು) ಶೈತ್ಯಕ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಪ್ರಾಥಶಾಲೆಗಳಲ್ಲಿ ತಾತ್ಕಾಲಿಕವಾಗಿ ಉಪಾಧ್ಯಾಯರ ನೇಮಕಾತಿ

೧೧೯೪. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿನ ಪ್ರೌಢ ಶಾಲೆಗಳಲ್ಲಿ ತಾತ್ಕಾಲಿಕವಾಗಿ ಮಾಹೆಯಾನ ೧೦೦ ರೂ. ಗಳನ್ನು ನೀಡಿ ನೇಮಿಸಿಕೊಂಡ ಪದವೀಧರ ಸಂಖ್ಯೆ ಎಷ್ಟು ?

ಆ) ಅವರ ಸಂಬಳ ಅಥವಾ ಸಂಭಾವನೆ ಕೊಡುತ್ತಿರುವುದನ್ನು ಜಾಸ್ತಿ ಮಾಡಲಾಗುವುದೆ.

ಇ) ಅವರನ್ನು ಖಾಯಂ ಮಾಡಿಕೊಳ್ಳಲು ಯೋಜನೆಯಿದೆಯೇ.

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯಮಂತ್ರಿಗಳು).—

ಅ) ೩೨೩೩.

ಆ) ಈ ವಿಷಯವು ಸರಕಾರದ ಮುಂದಿದೆ.

ಇ) ಇಲ್ಲ.

ಕೋಲಾರ ಜಿಲ್ಲೆಯ ಹಳ್ಳಿಗಳ ಪಾಠ ಶಾಲೆಗಳಲ್ಲಿ ಉಪಾಧ್ಯಾಯರ ಕೊರತೆ

೯೯೧. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).— ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆಯಲ್ಲಿ ಮತ್ತು ಮುಳಬಾಗಿಲು ತಾಲ್ಲೂಕಿನ ಅನೇಕ ಹಳ್ಳಿಗಳ ಪಾಠ ಶಾಲೆಗಳಲ್ಲಿ ಉಪಾಧ್ಯಾಯರುಗಳಿಲ್ಲದೆ ಪಾಠ ಶಾಲೆಗಳು ಪ್ರಾರಂಭವಾಗದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ,